<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ವಾದಿಯರ ಪರವಾಗಿಃ ಶ್ರೀ ಸಿ ಕೆ ಎಸ್ ವಕೀಲರಿಂದಃ</u>

ನನ್ನ ತಂದೆಯ ಹೆಸರು ಬೈನಕಲ್ ಸಣ್ಣ ಪಾಪಯ್ಯ. ನಮ್ಮ ತಂದೆಗೆ ನಾವು ಒಟ್ಟು ಮೂರು ಜನ ಮಕ್ಕಳು. ಬೋರಮ್ಮ, ಬೋರಯ್ಯ ಮತ್ತು ಪಾಪಣ್ಣ. ಬೋರಯ್ಯ ನನ್ನು ಬೆಎನಕಲ್ ಬೋರಯ್ಯ ಎಂದು ಬಟಾಣಿ ಬೋರಯ್ಯ ಎಂದು ಕರೆಯುತ್ತಾರೆಂದರೆ ಸರಿ. ನನ್ನನ್ನು ಸಣ್ಣಪಾಪಯ್ಯ ಎಂದು ಕರೆಯುತ್ತಾರೆಂದರೆ ಸರಿ. ಬಟಾಣಿ ಬೋರಯ್ಯ ನನ್ನ ಅಣ್ಣ ಎಂದರೆ ಸರಿ.

ನನ್ನ ತಾತನ ಹೆಸರು ಓಬಯ್ಯ. ನಮ್ಮ ತಾತನಿಗೆ ಇಬ್ಬರು ಹೆಂಡತಿಯರು. ಹಿರಿಯ ಹೆಂಡತಿಯ ಹೆಸರು ಓಬಮ್ಮ, ಕಿರಿಯ ಹೆಂಡತಿಯ ಹೆಸರು ಪಾಪಮ್ಮ. ಹಿರಿಯ ಹೆಂಡತಿಗೆ ಎಷ್ಟು ಜನ ಮಕ್ಕಳೊ ನನಗೆ ಗೊತ್ತಿಲ್ಲ. ಕಿರಿಯ ಹೆಂಡತಿಗೆ ಎಷ್ಟು ಜನ ಮಕ್ಕಳೊ ನನಗೆ ಗೊತ್ತಿಲ್ಲ. ನನಗೆ ಪಾಲಮ್ಮನಿಗೆ ಎಷ್ಟು ಜನ ಮಕ್ಕಳೊ ನನಗೆ ಗೊತ್ತು. ಒಟ್ಟು ಏಳು ಜನ ಮಕ್ಕಳು ಐದು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ಗಂಡು ಮಕ್ಕಳು ಯಾರು ಯಾರೆಂದರೆ ಪಾಪಯ್ಯ, ಬೈನಕಲ್ ಸಣ್ಣ ಪಾಪಯ್ಯ, ದೊಡ್ಡ ಪಾಲಯ್ಯ, ಬೋರಯ್ಯ ಹಾಗೂ ಸಣ್ಣ ಪಾಲಯ್ಯ ಹೆಣ್ಣು ಮಕ್ಕಳು ಓಬಮ್ಮ ಮತ್ತು ಪಾಪಮ್ಮ.

ಓಬಯ್ಯನ ಮಗ ಸಣ್ಣ ಪಾಪಯ್ಯನಿಗೆ ಮದುವೆಯಾಗಿತ್ತು. ಸಣ್ಣ ಪಾಪಯ್ಯನಿಗೂ ಇಬ್ಬರು ಹೆಂಡತಿಯರು ಅವರು ಪಾಲಮ್ಮ ಮತ್ತು ಇನ್ನೊಬ್ಬರು ಹೆಸರು ನನಗೆ ಗೊತ್ತಿಲ್ಲ. ಸಣ್ಣ ಪಾಪಯ್ಯ ಮತ್ತು ಪಾಲಮ್ಮನಿಗೆ ಮಕ್ಕಳು ಇರಲಿಲ್ಲ. ಸಣ್ಣ ಪಾಪಯ್ಯ ಮತ್ತು ಇನ್ನೊಬ್ಬ ಹೆಂಡತಿಗೂ ಕೂಡ ಯಾವುದೇ ಮಕ್ಕಳು ಇರಲಿಲ್ಲ.

ದೊಡ್ಡ ಬೋರಯ್ಯನಿಗೆ ಎಷ್ಟು ಜನ ಹೆಂಡತಿಯರೊ ನನಗೆ ಗೊತ್ತಿಲ್ಲ. ದೊಡ್ಡ ಬೋರಯ್ಯನಿಗೆ ಶಾರದಮ್ಮ ಒಬ್ಬಳೆ ಹೆಂಡತಿ. ದೊಡ್ಡ ಬೋರಯ್ಯ ಶಾರದಮ್ಮನಿಗೆ ಬಡಿಗೆ ಪಾಪಣ್ಣ, ಬೋರಯ್ಯ, ಮೀನಾಕ್ಷಮ್ಮ, ಪಾಪಮ್ಮ ಮತ್ತು ಶಿವಣ್ಣ ಎಂಬ ಮಕ್ಕಳು.

ದೊಡ್ಡ ಪಾಪಯ್ಯ ಹೆಂಡತಿಯ ಹೆಸರು ಸಣ್ಣಕ್ಕ. ಅವರಿಗೆ ನಾಲ್ಕು ಜನ ಮಕ್ಕಳು. ಬೋರಮ್ಮ, ಪಾಪಮ್ಮ, ಗೌರಮ್ಮ, ಶಾಂತಮ್ಮ.

ದೊಡ್ಡ ಪಾಲಯ್ಯನ ಹೆಂಡತಿಯ ಹೆಸರು ಪಾಲಮ್ಮ. ಅವರಿಗೆ ಮೂರು ಜನ ಮಕ್ಕಳು. ಬೋರಯ್ಯ, ಗಾಯತ್ರಿ ಮತ್ತು ಗೀತಾಮ್ಮ.

ಸಣ್ಣ ಪಾಲಯ್ಯನಿಗೆ ಮದುವೆಯಾಗಿಲ್ಲ ಅವನು ಇನ್ನು ಜೀವಂತ ಇದ್ದಾನೆ.

ನಮ್ಮ ತಾತ ಓಬಯ್ಯನ ತಂದೆ ಬೈನಕಲ್ ಬೋರಯ್ಯ. ಅವನನ್ನು ಕೊಂಡ ಬೋರಯ್ಯ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿರುವುದು ಬೈನಕಲ್ ಬೋರಯ್ಯ ಎಂದು ಮಾತ್ರ. ಬೈನಕಲ್ ಬೋರಯ್ಯ ನಿಗೆ ನಮ್ಮ ತಾತ ಓಬಯ್ಯ, ಪಾಪಯ್ಯ ಹಾಗೂ ಬೈನಕಲ್ ಬೋರಯ್ಯ ಎಂದು ಮೂರು ಜನ ಮಕ್ಕಳು ಎಂದರೆ ಸರಿ. ನಾನು ಸ್ವತಃ ಹೇಳುವುದೇನೆಂದರೆ ಬೈನಕಲ್ ಬೋರಯ್ಯ ದೊಡ್ಡವನ್ನು ಅವನ ನಂತರ ಓಬಯ್ಯ ನಂತರ ಪಾಪಯ್ಯ.

ನನ್ನ ಚಿಕ್ಕ ತಾತ ಬೈನಕಲ್ ಬೋರಯ್ಯ ನಿಗೆ ಇಬ್ಬರು ಹೆಂಡತಿಯರು. ಅವರು ಹೆಸರುಗಳು ನನಗೆ ಗೊತ್ತಿಲ್ಲ ಯಾರೊ ಒಬ್ಬರನ್ನು ಪಾಲಮ್ಮ ಎಂದು ಹೇಳುತ್ತಿದುದು ನೆನಪು. ನನ್ನ ಚಿಕ್ಕ ತಾತ ಪಾಪಯ್ಯನಿಗೆ ಒಬ್ಬನೆ ಮಗ. ಅವನ ಹೆಸರು ಕಿವುಡು ಪಾಪಯ್ಯ.

ಕಿವುಡು ಪಾಪಯ್ಯ ಮೊದಲನೆ ಹೆಂಡತಿಯ ಮಗ. ನಮ್ಮ ಚಿಕ್ಕ ತಾತ ಪಾಪಯ್ಯನ ಹೆಂಡತಿಯ ಹೆಸರು ನನಗೆ ಅಷ್ಟಾಗಿ ಗೊತಿಲ್ಲ.

ನಮ್ಮ ಚಿಕ್ಕ ತಾತ ಪಾಪಯ್ಯ ಮತ್ತು ಪಾಲಮ್ಮನಿಗೆ ಎಷ್ಟು ಜನ ಮಕ್ಕಳು ಎಂದು (ಸಾಕ್ಷಿಯು ಸಾಕಷ್ಟು ಸಮಯ ಯೋಚನೆ ಮಾಡಿ) ನೆನಪಾಗುತ್ತಿಲ್ಲ.

ಕಿವುಡು ಪಾಪಯ್ಯನಿಗೆ ಒಬ್ಬಳೆ ಹೆಂಡತಿ ಅವಳ ಹೆಸರು ಪಾಪಮ್ಮ. ಅವರ ಮಕ್ಕಳು ಇಬ್ಬರು ಗಂಡು ಮಕ್ಕಳು. ಪಾಪಯ್ಯ ಮತ್ತು ಬೋರಯ್ಯ. ಆ ಪಾಪಯ್ಯ ನನ್ನು ಬೈನಕಲ್ ಪಾಪಯ್ಯ ಎಂದು ಕರೆಯುತ್ತಾರೆಂದರೆ ಸರಿ.

ಬೈನಕಲ್ ಬೋರಯ್ಯ ನನ್ನು ನಾನು ನೋಡಿಲ್ಲ. ಬೈನಕಲ್ ಬೋರಯ್ಯ ನಿಗೆ ಕುರಿ ಪಾಲಯ್ಯ ಎಂದು ಮಗನಿದ್ದು ಅವನನ್ನು ಬೈನಕಲ್ ಪಾಲಯ್ಯ ಎಂದು ಕರೆಯುತ್ತಿದ್ದರು ಎಂದರೆ ಸರಿ. ಬೈನಕಲ್ ಪಾಲಯ್ಯ ಯಾನೆ ಕುರಿ ಪಾಲಯ್ಯ ಪಾಲಮ್ಮ ಮತ್ತು ಪಾಪಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಪಾಪಮ್ಮನಿಗೆ ಮಕ್ಕಳು ಇರಲಿಲ್ಲ. ಪಾಲಮ್ಮನಿಗೆ ಬೋರಯ್ಯ, ಒಬಯ್ಯ, ಬಸಮ್ಮ, ಪುಟ್ಟಮ್ಮ ಹಾಗೂ ಪಾಪಣ್ಣ ಎಂದರೆ ಸರಿಯಲ್ಲ. ಪಾಲಮ್ಮನಿಗೂ ಕೂಡ ಮನೆ ಬಿಟ್ಟು ಹೋಗುವ ಕಾಲಕ್ಕೆ ಮಕ್ಕಳು ಇರಲಿಲ್ಲ ಎಂದು ನಮ್ಮ ತಾತ ಮತ್ತು ನಮ್ಮ ತಂದೆ ಹೇಳುತ್ತಿದ್ದರು. ಅವರು ಚೌಳಕೆರೆ ಡಿಪೊ ತಿಪ್ಪಯ್ಯನ ಮಕ್ಕಳು.

ಪಾಲಮ್ಮನ ಮಕ್ಕಳಾದ ಬೋರಯ್ಯ, ಒಬಯ್ಯ, ಬಸಮ್ಮ, ಪುಟ್ಟಮ್ಮ ಹಾಗೂ ಪಾಪಣ್ಣ ನಾನು ನೋಡಿಲ್ಲ. ಪಾಲಯ್ಯನ ಮಗ ಬೋರಯ್ಯನಿಗೆ ಭಾಗ್ಯಮ್ಮ, ಲಕ್ಷ್ಮಿ, ಕರಿಬಸಪ್ಪ, ಸೋಮಶೇಖರ ಮತ್ತು ಸಣ್ಣ ಬಸಮ್ಮ ಎಂಬ ಐದು ಜನ ಮಕ್ಕಳು ಎಂದರೆ

ನಾನು ನೋಡಿಲ್ಲ.

ಓಬಯ್ಯನಿಗೆ ಮೂರು ಜನ ಮಕ್ಕಳು ಸೋಮಶೇಖರ, ಪಾಪಣ್ಣ ಮತ್ತು ಸಣ್ಣ ಬಸಮ್ಮ ಎಂದರೆ ನಾನು ಅವರನ್ನು ನೋಡಿಲ್ಲ ನನಗೆ ಅವರ ಪರಿಚಯವೇ ಇಲ್ಲ.

ಈ ದಾವೆಯಾರು ಯಾರು ಯಾರು ಯಾರ ವಿರುದ್ದ ಯಾವ ವಿಚಾರಕ್ಕಾಗಿ ಸಲ್ಲಿಸಿದ್ದಾರೆನ್ನುವ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಪಾಪಯ್ಯ ಮತ್ತು ಓಬಯ್ಯ ನವರು ನನ್ನ ಹಾಗೂ ನನ್ನ ಅಣ್ಣನ ವಿರುದ್ದ ದಾವೆ ಸಲ್ಲಿಸಿದ್ದಾರೆ. ಬೇರೆ ಯಾರ ವಿರುದ್ದ ದಾವೆ ಸಲ್ಲಿಸಿದ್ದಾರೊ ನನಗೆ ಗೊತ್ತಿಲ್ಲ.

ಪಾಪಯ್ಯ ಓಬಯ್ಯನೊಂದಿಗೆ ಪಾಪಣ್ಣ, ಓಬಯ್ಯ ಸೇರಿ ಹಾಕಿದ್ದಾರೆ ನನಗೆ ಅವರು ಮೂರು ಜನ ಮಾತ್ರ ಗೊತ್ತು. ನನಗೂ ಅವರಿಗೂ ಪರಿಚಯವೆ ಇಲ್ಲ ಕೇಸು ಹಾಕಿದಾಗಿನಿಂದ ಗೊತ್ತು.

ನಾವು ಅಣ್ಣ ತಮ್ಮಂದಿರು ಒಬ್ಬರಿಗೊಬ್ಬರು ಚೆನ್ನಾಗಿಯೆ ಇದ್ದೇವೆಂದರೆ ಸರಿ ನಾವು ಬೇರೆ ಬೇರೆಯಾಗಿ ಇದ್ದೇವೆ. ಬಟಾಣಿ ಬೋರಯ್ಯ ಮತ್ತು ನಾನು ಯಾವುದೇ ವೈಷಮ್ಯವಿಲ್ಲದೆ ಚೆನ್ನಾಗಿದ್ದೇವೆಂದರೆ ಸರಿ. ನಾನು ನಮ್ಮ ಕುಟುಂಬದ ವಂಶವೃಕ್ಷವನ್ನು ಪಡೆದಿದ್ದೇನೆ. ನಾನು ನಮ್ಮ ವಂಶದ ಬಗ್ಗೆ ಮೇಲೆ ಹೇಳಿದಂತೆ ವಂಶವೃಕ್ಷವನ್ನು ತಹಶೀಲ್ದಾರರಿಂದ ಪಡೆದಿದ್ದೇನೆ. ನ್ಯಾಯಾಲಯಕ್ಕೆ ಸಲ್ಲಿಸಲು ಅದನ್ನು ಪಡೆದುಕೊಂಡಿದ್ದೇವೆ. ನಾನು ಮತ್ತು ನಮ್ಮ ಅಣ್ಣ ಸೇರಿ ಪಡೆದಿದ್ದೇವೆ. ಅದನ್ನು ನಾವೇ ಹೇಳಿ ಬರೆಸಿರುತ್ತೇವೆ. ನಾನು ಮತ್ತು ನಮ್ಮ ಅಣ್ಣನ ವಂಶವೃಕ್ಷವನ್ನು ಮಾತ್ರ ಬರೆಸಿದ್ದೇವೆ.

ನಮಗೆ ನ್ಯಾಯಾಲಯದ ಸಮನ್ಸ್ ಬಂದ ನಂತರ ನಮ್ಮ ವಕೀಲರಿಗೆ ತೋರಿಸಿ

ನಮ್ಮ ವಿರುದ್ದ ಏನೆಂದು ದಾವೆ ಸಲ್ಲಿಸಿದ್ದಾರೆಂದು ತಿಳಿದುಕೊಂಡಿದ್ದೇನೆ. ಸ ನಂ.183 ರ ಮೇಲೆ 151 ಮತ್ತು 150 ಸ್ವತ್ತುಗಳ ಮೇಲೆ ದಾವೆ ಸಲ್ಲಿಸಿದ್ದಾರೆಂದು ತಿಳಿದುಕೊಂಡಿದ್ದೇನೆ. ವಾದ ಪತ್ರವನ್ನು ನೋಡಿದ ಮೇಲೆ ಅದರಲ್ಲಿರುವ ಪಕ್ಷಗಾರರು ನಮ್ಮ ವಂಶದವರೆ ಎಂದು ಬರೆಸಿದ್ದಾರೆಂದು ಕೇಳಿ ತಿಳಿದುಕೊಂಡಿಲ್ಲ. ಕೊಂಡಬೋರಯ್ಯನ ವಂಶವೃಕ್ಷವನ್ನು ಪಡೆದುಕೊಳ್ಳಲು ನಾವು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಬೈನಕಲ್ ಬೋರಯ್ಯನ ವಂಶವೃಕ್ಷವನ್ನು ಪಡೆದುಕೊಳ್ಳಲು ನಾವು ಪ್ರಯತ್ನ ಮಾಡಿಲ್ಲ ಎಂದರೆ ಸರಿ.

ಪಿ ಬೋರಯ್ಯ ಎಂದರೆ ನಮ್ಮ ಅಣ್ಣ. ಈಗ ನೀವು ತೋರಿಸುತ್ತಿರುವ ನಿಪಿ 68 ರಿಂದ 70 ಪೊಟೊಗಳಲ್ಲಿರುವ ನಿಪಿ 68 ಎ ರಿಂದ 70 ಎ ವ್ಯಕ್ತಿ ನನ್ನ ಅಣ್ಣ ಪಿ ಬೋರಯ್ಯ ಯಾನೆ ಬೈನಕಲಕ್ ಬೋರಯ್ಯ. (ಸದರಿ ಪೊಟೊಗಳನ್ನು ವಿಚಾರಣಾ ಕಾಲಕ್ಕೆ ಕನ್ ಫ್ರಂಡ್ ಮಾಡಿಸಿದ್ದು ಸಾಕ್ಷಿ ವ್ಯಕ್ತಿಯನ್ನು ಗುರುತಿಸಿದ್ದರಿಂದ ನಿಶಾನೆಯಾಗಿ ಪರಿಗಣಿಸಿದ್ದು ಅವುಗಳ ನೆಗೆಟಿವ್ ಅಥವಾ ಸಿಡಿಯನ್ನು ಹಾಜರುಪಡಿಸುವ ಷರತ್ತಿನೊಂದಿಗೆ ನಿಶಾನೆಯಾಗಿ ಪರಿಗಣಿಸಿದೆ).

ನಿಪಿ 69 ಪೊಟೊದಲ್ಲಿರುವ ನಿಪಿ 69 ಬಿ ವ್ಯಕ್ತಿ ನ್ಯಾಯಾಲಯದ ಮುಂದೆ ಇರುವ ಪಾಪಣ್ಣ ಎಂದರೆ ಸರಿ ನಾನು ಸ್ವತಃ ಹೇಳವುದೇನೆಂದರೆ ಅವನು ಡಿಪೋ ತಿಪ್ಪಯ್ಯನ ಮಗ. ನಿಪಿ 68 ಪೊಟೊದಲ್ಲಿ ನನ್ನ ಅಣ್ಣ ಗದ್ದುಗೆ ಪೂಜೆ ಮಾಡುತ್ತಿದ್ದಾನೆಂದರೆ ಸರಿ. ಪಾಪಣ್ಣ ಮಗಳ ಮದುವೆಯಲ್ಲಿ ನನ್ನ ಅಣ್ಣ ಕುಟುಂಬದ ಯಜಮಾನನಾಗಿ ಗದ್ದುಗೆ ಪೂಜೆ ಮಾಡುತ್ತಿದ್ದಾನೆಂದರೆ ಮದುವೆಗೆ ಹೋಗಿರಬಹುದು. ನನ್ನ ಕುಟುಂಬದ ಯಜಮಾನನಾಗಿ ಗದ್ದುಗೆ ಪೂಜೆ ಮಾಡುತ್ತಿದ್ದಾನೆಂದರೆ ಸರಿಯಲ್ಲ.

ನಿಪಿ 70 ಪೊಟೊದಲ್ಲಿ ನನ್ನ ಅಣ್ಣ ಕುಟುಂಬದ ಯಜಮಾನನಾಗಿ ವಿಳ್ಳೆದೆಲೆ ಶಾಸ್ತ್ರವನ್ನು ಮಾಡುತ್ತಿದ್ದಾನೆಂದರೆ ಸರಿಯಲ್ಲ ಅವನು ಮದುವೆಗೆ ಹೋಗಿರಬಹುದು. ನಿಪಿ 70 ಪೊಟೊದಲ್ಲಿ ನನ್ನ ಅಣ್ಣ ವಿಳ್ಳೆದೆಲೆ ಶಾಸ್ತ್ರವನ್ನು ಮಾಡುತ್ತಿರುವುದು ಕಾಣುತ್ತಿದೆ ಎಂದರೆ ಸರಿ. ನಿಪಿ 69 ಪೊಟೊದಲ್ಲಿ ನೀವು ತೋರಿಸುತ್ತಿರುವ ವಿಳ್ಳೆದೆಲೆ ತೆಗೆದುಕೊಳ್ಳುತ್ತಿರುವ ವ್ಯಕ್ತಿಗಳು ಯಾರೆಂದು ನನಗೆ ಗೊತ್ತಿಲ್ಲ. ಸದರಿ ಪೊಟೊದಲ್ಲಿ ನನ್ನ ಅಣ್ಣ ಇದ್ದಾನೆಂದರೆ ಸರಿ ಅವನು ಹೀಗೆ ಮಾಡಬೇಕೆಂದು ಹೇಳುತ್ತಿದ್ದಾನೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ನೀಡಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.